ದಾಖಲೆಯನ್ನೆಲ್ಲಾ ತರಿಸಿ, ಮಂತ್ರಿಮಂಡಲದ ಸಭೆಯ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಅವರು ಸರಿಯಾಗಿ ಒಂದು representation ಕೊಡಿ ಎಂದು ಹೇಳಿದ್ದಾರೆ.

ಶ್ರಿ ಹೆಚ್. ಕೋನರೆಡ್ಡಿ: ಕೇಸ್ ಹಾಕಿರುವುದಕ್ಕೆ ಅಲ್ಲಿ ರೈತರು ದಿನಾಂಕ 21 ರಂದು ನವಲಗುಂದ ಪ್ರತಿಭಟನೆ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅದಕ್ಕಾಗಿ ಸರಕಾರದ ಪರವಾಗಿ ಮಾನ್ಯ ಮಂತ್ರಿಗಳಿಂದ ಒಂದು ಮೆಸೇಜ್ ರೈತರಿಗೆ ಹೋಗಬೇಕು.

ಶ್ರೀ ಕೆ. ಜೆ. ಜಾರ್ಜ್: ಕೇಸ್ ಹಾಕಿರುವುದಕ್ಕೆ ನಾನು ಇಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದರ ಸಂಪೂರ್ಣ ಅಧಿಕಾರ ಕ್ಯಾಬಿನೆಟ್‌ಗೆ ಇದೆ, ಆ ಕ್ಯಾಬಿನೆಟ್‌ಗೆ ತರಬೇಕಾದರೆ, ದಾಖಲೆಗಳೆಲ್ಲಾ ಬರಬೇಕಾಗುತ್ತದೆ.

ಶ್ರೀ ಹೆಚ್. ಕೋನರೆಡ್ಡಿ: ಪರಿಶೀಲನೆ ಮಾಡುತ್ತೇವೆಂದು ಹೇಳಿ, ದಯವಿಟ್ಟು ಮಾಡಿ.

ಶ್ರೀ ಕೆ. ಜೆ. ಜಾರ್ಜ್: ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸುತ್ತಾರೆ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇವಲ್ಲ, ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ, ಈ ಬಗ್ಗೆ ಕ್ಯಾಬಿನೆಟ್ ಡಿಸಿಜನ್ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ಒಂದು ರೈತರ ಪರವಾದ ಶಾಸಕರಾಗಿ ನೀವೇ ಸರಕಾರಕ್ಕೆ representation ಕೊಡಿ.

xiii) ವಿಷಯ: ರೈತರಿಗೆ ಪರಿವರ್ತಕಗಳು ಹಾಗೂ ಇತರೆ ಉಪಕರಣಗಳನ್ನು ನೀಡಲು ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಹಾಸನ ತಾಲ್ಲೂಕಿನ ದುದ್ದ ಹೋಬಳಿಯ ಆರ್.ಎಸ್.ಡಿ.–1 ಉಪ ವಿಭಾಗದಲ್ಲಿ ಸಹಾಯಕ ಕಾರ್ಯ

ಪಾಲಕ ಅಭಿಯಂತರರು ಪರಿವರ್ತಕಗಳನ್ನು ಹಾಗೂ ಇತರೆ ಉಪಕರಣ ಗಳನ್ನು ನೀಡಲು ರೈತರಿಗೆ ಹಾಗೂ ಸಾರ್ವಜನಿಕರಿಗೆ ತಿಂಗಳಾನುಗಟ್ಟಲೆ ಕಾಯಿಸಿ, ಅವರಿಂದ ಸುಮಾರು ₹ 4000/– ರಿಂದ 5000/– ಗಳ ವರೆಗೂ ಹಣ ವಸೂಲಿ ಮಾಡುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಕುಡಿ ಯುವ ನೀರಿಗೆ ಹಾಗೂ ರೈತರ ವಿದ್ಯುತ್ ಪಂಪ್ ಸೆಟ್ ಗಳಿಗೆ ಬಹಳ ತೊಂದರೆಯಾಗುತ್ತಿದ್ದು, ಸದರಿ ಅಭಿಯಂತರರನ್ನು ಅದೇ ಕ್ಷೇತ್ರದ ಆರ್.ಎಸ್ .ಡಿ.–2 ಉಪ ವಿಭಾಗಕ್ಕೆ ವರ್ಗಾಯಿಸಲಾಗಿದ್ದು, ಇಂತಹ ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿದೆ. ₹5000 ಹಣ ತೆಗೆದುಕೊಂಡಿದ್ದಾರಂದು ಅರ್ಜಿ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. ಅವರನ್ನು ಮತ್ತೆ ನನ್ನ ಕ್ಷೇತ್ರಕ್ಕೆ ಹಾಕಿದ್ದಾರೆ. ₹4000/– ರಿಂದ 5000/– ವರೆಗೆ ಹಣ ತೆಗೆದುಕೊಳ್ಳುವುದು, ಅವರ ಮೇಲೆ ವಿಕ್ಟರಿ ಮಾಡುವುದೆಂದು ಮಂತ್ರಿಗಳೇ ಹೇಳಿದ ಮೇಲೆ ನಾವು ಇನ್ನೇನು ಹೇಳಬೇಕು ಹೇಳಿ. ಅರ್ಜಿ ಬಂದಿರುವುದು ನಿಜ. ವಿಚಾರಣೆ ಮಾಡುತ್ತೇವೆಂದು ಹೇಳಿದ್ದೀರಿ, ಅದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಬ ಯಸುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು): ನಮಗೆ ಏನೇನು ಬರುತ್ತವೆಂದು ತಿಳಿಸಬೇಕಲ್ಲ. ಈಗ ಅರ್ಜಿ ಕೊಟ್ಟಿದ್ದಾರೆಂದು ಹೇಳುತ್ತೀರಿ. ಎಂಡಾಸುಮೆಂಟ್ ಕೊಟ್ಟಿರುತ್ತೇವೆ. ಬಂದಿರುತ್ತೀರಿ, ಅದಕ್ಕೋಸ್ಕರ, ನಾನು expecially transformers ವಿಚಾರದಲ್ಲಿ ಒಂದು ರೀತಿ ರೆವಲ್ಯೂಷನ್ ಲೈಪ್ ಮಾಡುವುದಕ್ಕೆ ಹೊರಟಿದ್ದೇನೆ. ನಿನ್ನೆ ನನ್ನ ತಮ್ಮ ಹೇಳಿದ, ನೀನು ಬರೀ ಇಲ್ಲಿ ಮಾತನಾಡುತ್ತೀಯ ಅಷ್ಟೆ, ಅಲ್ಲಿ ₹5000 ರಿಂದ 10000 ಇಲ್ಲದೆ transformer ಕೊಡುವುದಿಲ್ಲವೆಂದು ಹೇಳಿದರು.

ಶ್ರೀ ಪಿ ಹೆಚ್ ಸಿ ಬಾಲಕೃಷ್ಣ: ₹5000 ತೆಗೆದುಕೊಂಡರೂ ಪರವಾ ಗಿಲ್ಲ, ಕನಿಷ್ಠ 6 ತಿಂಗಳು ಬರುವಂಥ transformer ಕೊಡಿ, ತೆಗೆದುಕೊಂಡು ಹೋಗಿ ಹಾಕಿದರೆ ಅದು ಮಾರನೇ ದಿವಸವೇ ಹೋಗಿಬಿಡುತ್ತದೆ.

ಶ್ರೀ ಡಿ. ಕೆ ಶಿವಕುಮಾರ್: ಅದಕ್ಕೆ ತಾವೇನು ಅರ್ಜಿಯನ್ನು ಕೊಟ್ಟಿದ್ದೀರಿ, ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ, ಇನ್ನೊಂದು major decision ಏನು ತೆಗೆದುಕೊಂಡಿದ್ದೇನೆಂದರೆ, ಈ transformer ವಿಚಾರದಲ್ಲಿ ಎಲ್ಲಾ ಕಡೆ ಕಡ್ಡಾಯವಾಗಿ ಬ್ಯಾಂಕ್ ಮಾಡಿಸುತ್ತಿದ್ದೇನೆ, we have already started. ಎರಡನೇಯದಾಗಿ, ಈ ಎಷ್ಟು transformer ಗಳು ಇವೆ, ಆ ಬ್ಯಾಂಕಿಗೆ ಅದರ ಡಬಲ್ ಮಾಡಿಸುತ್ತಿದ್ದೇನೆ, ಮೂರನೆಯದಾಗಿ, transformer ಏನಾದರೂ ಸುಟ್ಟು ಹೋದರೆ, ಪ್ರತಿ ಜಿಲ್ಲೆಗೆ ಒಬ್ಬನನ್ನು Ombudsmen ಎಂದು ನೇಮಕ ಮಾಡಿದ್ದೇನೆ. ಅವನು ಈ ಸಿಟಿಗಳಲ್ಲಿ ಕುಡಿಯು ನೀರಿಗೆ ಹೋಯಿತೆಂದರೆ, ಒಂದು ದಿವಸದಲ್ಲಿ ಆತ ಸರಿಪಡಿಸಬೇಕು, ನೀರಾವರಿ ಪಂಪ್‌ಸೆಟ್‌ಗೆ ಹೋಯಿತೆಂದರೆ 3 ದಿವಸದಲ್ಲಿ ಮಾಡಬೇಕು, ಮೂರು ದಿವಸದಲ್ಲಿ ಮಾಡಲಿಲ್ಲವೆಂದರೆ, ಅವನ ಸಂಬಳದಲ್ಲಿ ಒಂದು ಕಂಪ್ಲೆಂಟ್‌ಗೆ ರೈತನಿಗೆ ಇಷ್ಟು ಹಣ ಕಟ್ಟಿಕೊಡಬೇಕು, This, I have brought. ಈಗ ನಾನು ನನ್ನ ಬೇಡಿಕೆ ಮೇಲೆ ಉತ್ತರ ಕೊಡುವಾಗ ಈ ಬಗ್ಗೆ ಸ್ಪಷ್ಟವಾಗಿ ಉತ್ತರಿಸುತ್ತೇನೆ, ಏನು ರೇವಣ್ಣನವರು ಹೇಳಿದ್ದಾರೆ, ಇದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ. ಏಕೆಂದರೆ, ನಾವು ದೊಡ್ಡದಾಗಿ ಬದಲಾವಣೆ ತರುವುದಕ್ಕಾಗಿದ್ದರೂ ಇಂಥ ವಿಚಾರಗಳಲ್ಲಿ ರೈತರಿಗೆ ಸಹಾಯ ಮಾಡಲು ಮಾಡುತ್ತಿದ್ದೇವೆ, ಇಂಜಿನಿಯರ್‌ಗಳಾರೂ ಕಂಟ್ರೋಲ್‌ಗೆ ಸಿಗುತ್ತಿಲ್ಲ, ಅದಕ್ಕೆ ಪ್ರತಿಯೊಂದು ಸ್ಟೇಷನ್ ಗೂ, ರೈತರಿಗೆ ಅವರು ತಗುಲಿ ಹಾಕಿಕೊಳ್ಳಬೇಕು. ಅದಕ್ಕೊಂದು ಸಿಸ್ಟಂ ಕ್ರಿಯೇಟ್ ಮಾಡುತ್ತಿದ್ದೇನೆ, ಖಂಡಿತಾ ನನ್ನ ಬೇಡಿಕೆ ಮೇಲೆ ಉತ್ತರಿಸುವಾಗ ತಿಳಿಸುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ: ಮಾನ್ಯ ಸಚಿವರೆ, HUDS ಅಳವಡಿಸಿ, ಈಗ pilot project ಅನ್ನು ಗ್ರಾಮಾಂತರ ಪ್ರದೇಶದಲ್ಲೇನು ತೆಗೆದುಕೊಂಡಿದ್ದೀರಾ, ಅದನ್ನು ಅಳವಡಿಸಿ, ಈ ತೊಂದರೆಯೇ ಇರುವುದಿಲ್ಲ.

ಅಧ್ಯಕ್ಷರು: ಒಳ್ಳೆಯ ಕತೆಯಾಯಿತಲ್ಲಾ, ತುಂಬಾ ನಿರ್ದಿಷ್ಟವಾಗಿ ಉತ್ತರ ಹೇಳಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್: ಈ ಇಲಾಖೆಯ ಬೇಡಿಕೆಯ ಮೇಲೆ ಏನೇನು ಬೇಕೊ ಚರ್ಚೆ ಮಾಡಿ, ರೇವಣ್ಣ ನನ್ನ ಸ್ನೇಹಿತರು.,

ಶ್ರೀ ಸಿ. ಟಿ. ರವಿ: ಬೆಳಿಗ್ಗೆ ನಿಂಬೆಹಣ್ಣನ್ನು ಹಿಡಿದುಕೊಂಡು ಬಂದಿದ್ದರು, ಅದನ್ನು ಶಿವಕುಮಾರ್ ಅವರಿಗೆ ಕೊಟ್ಟಿರಬಹುದು.

ಶ್ರೀ ಬಿ. ಸುನಿಲ್ ಕುಮಾರ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇವರು (ಶಿವಕುಮಾರ್) ಈ ರೀತಿ ಹೇಳಿದ್ದರಿಂದ ಯಾರಿಗೆ ಕರೆಂಟ್ ಶಾಕ್ ಹೊಡೆಯಿತು?

ಶ್ರೀ ಡಿ. ಕೆ. ಶಿವಕುಮಾರ್: He is a former Power Minister.

ಅಧ್ಯಕ್ಷರು: ಆ ಕರೆಂಟ್ ಇದೆಯಲ್ಲಾ, ಅವರಿಗೂ ಹೊಡೆಯುವುದಿಲ್ಲ, ಇವರಿಗೂ ಹೊಡೆಯುವುದಿಲ್ಲ, ನಿಮಗೆ ಹೊಡೆಯುತ್ತದೆ.

ಶ್ರೀ ವೈ. ಎಸ್. ವಿ. ದತ್ತಾ: ಮಾನ್ಯ ಶಿವಕುಮಾರ್ ಅವರೆ, ಮೊನ್ನೆ ಕಡೂರಿನದು transformer ಸಂಖ್ಯೆ double ಮಾಡಿ ಎಂದು ಬರೆದು ಕೊಟ್ಟಿರಿ, ಅದನ್ನು ಬೆಸ್ಕಾಂ Jar ಅವರಿಗೆ ಕೊಟ್ಟಿದ್ದೆ, ಇನ್ನೂ ಕ್ರಮವಾಗಿಲ್ಲ.

ಶ್ರೀ ಡಿ. ಕೆ. ಶಿವಕುಮಾರ್: ಬರುತ್ತದೆ, ಬರುತ್ತದೆ, ನಿನ್ನನ್ನು ಅವ್ಯಾವನೊ ಒಬ್ಬ ಅಗೌರವವಾಗಿ ಕಂಡ ಎಂದು ಹೇಳಿದಿರಿ, within a few minutes I suspended him.

ಶ್ರಿ ವೈ. ಎಸ್. ವಿ. ದತ್ತಾ: Thank you.

ಶ್ರೀ ಡಿ. ಕೆ. ಶಿವಕುಮಾರ್: ಈ ರಿಪ್ಲೈ ಕೊಟ್ಟಿದ್ದೇನೆ, ಅವರಿಗೆ ಸಮಾಧಾನವಾಗಿದೆ.

ಅಧ್ಯಕ್ಷರು: ಬಣಕಾರ್ ಇಲ್ಲ.

xiv) ವಿಷಯ: ಆನೆ ದಾಳಿಗೆ ತುತ್ತಾಗಿ ಬೆಳೆ ನಷ್ಟವಾಗಿದ್ದು, ರೈತರಿಗೆ ಪರಿಹಾರವನ್ನು ಜರೂರು ಒದಗಿಸಿಕೊಡುವ ಬಗ್ಗೆ: